ತೊಡಕು ಇರುವುದನ್ನು ಗಮನಿಸಿ, ಡಿಸೆಂಬರ್ 2011ರ ತನಕ ಪ್ರಸ್ತುತ ಇರುವ ಹೆಚ್ಚುವರಿ ಪ್ರಭಾರ ವ್ಯವಸ್ಥೆಯನ್ನೇ ಮುಂದುವರೆಸುವಂತೆ ಶಿಫಾರಸ್ಸು ಮಾಡಿರುವ ಕಾರಣ ಯಾರಿಗೂ ಮುಂಬಡ್ತಿಯನ್ನು ನೀಡಲಾಗಿರುವುದಿಲ್ಲ.

ಬಂಡಿಹಳ್ಳಿ ಏತ ನೀರಾವರಿ ಯೋಜನೆ

42 (116) ಶ್ರೀ ಬಿ. ಬಿ. ರಾಮಸ್ವಾಮಿ ಗೌಡ (ಕುಣಿಗಲ್):– ಮಾನ್ಯ ಜಲಸಂಪನ್ಮೂಲಗಳ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಸಣ್ಣ ನೀರಾವರಿ ಇಲಾಖೆಯಿಂದ ಕಾವೇರಿ ನೀರಾವರಿ ನಿಗಮಕ್ಕೆ ಹಸ್ತಾಂತರಗೊಂಡಿರುವ ಕುಣಿಗಲ್ ತಾಲ್ಲೂಕಿನ ಬಂಡಿಹಳ್ಳಿ ಏತ ನೀರಾವರಿ ಯೋಜನೆಯ ಯಂತ್ರೋಪಕರಣಗಳ ಖರೀದಿಗೆ ಅಥವಾ ದುರಸ್ಥಿಗೆ ಸರ್ಕಾರ ಕ್ರಮ. ಕೈಗೊಳ್ಳಲು ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು;

ಆ) ಹಾಗಿದ್ದಲ್ಲಿ, ಸ್ಥಗಿತಗೊಂಡಿರುವ ಯೋಜನೆಯನ್ನು ಪುನರ್ ಪ್ರಾರಂಭಿಸಲಾಗುವುದೇ?

ಶ್ರೀ ಬಸವರಾಜ್ ಬೊಮ್ಮಾಯಿ (ಜಲಸಂಪನ್ಮೂಲಗಳ ಸಚಿವರು):–

ಅ) ಬಂಡೀಹಳ್ಳಿ ಏತ ನೀರಾವರಿ ಯೋಜನೆಯನ್ನು 1983 ರಲ್ಲಿ ಕುಣಿಗಲ್ ತಾಲ್ಲೂಕು ಹುಲಿಯೂರುದುರ್ಗ ಹೋಬಳಿಯ ಬಂಡೀಹಳ್ಳಿ ಗ್ರಾಮದ ಬಳಿ ಶಿಂಷಾ ನದಿಯಿಂದ ನೀರನ್ನು ಪಂಪ್ ಮಾಡಿ 240 ಹೆ. ಅಚ್ಚುಕಟ್ಟು ಪ್ರದೇಶಕ್ಕೆ ನೀರೊದಗಿಸಲು, ಸಣ್ಣ ನೀರಾವರಿ ಇಲಾಖೆಯಿಂದ ಸ್ಥಾಪಿಸಲಾಗಿತ್ತು.

ಬಂಡಿಹಳ್ಳಿ ಏತ ನೀರಾವರಿ ಯೋಜನೆಯ ಅಚ್ಚುಕಟ್ಟು ಪ್ರದೇಶವು ತುಮಕೂರು ಶಾಖಾ ನಾಲೆಯ ಕಿ.ಮೀ. 200 ರಿಂದ ಮುಂದಿನ ಅಚ್ಚುಕಟ್ಟು ಪ್ರದೇಶದಲ್ಲಿ ಬರುತ್ತಿದ್ದು. ಈ ಕಾರಣದಿಂದಾಗಿ ಸದರಿ ಯೋಜನೆಯ ಪುನಶ್ಚೇತನವನ್ನು ಈ ಹಿಂದೆ ಕೈಗೊಂಡಿರುವುದಿಲ್ಲ. ಅಲ್ಲದೆ, ಶಿಂಷಾದಲ್ಲಿ ನೀರಿನ ಹರಿವಿನ ಪ್ರಮಾಣ ಕಡಿಮೆ ಇದ್ದ ಕಾರಣ ಯೋಜನೆಗೆ ನೀರಿನ ಅಲಭ್ಯತೆಯಿಂದಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗಲಿಲ್ಲ.

ತುಮಕೂರು ಶಾಖಾ ನಾಲೆಯ ಕಿ.ಮೀ. 200 ರಿಂದ ಮುಂದಿನ ಭಾಗದ ನಾಲೆಯನ್ನು ಇನ್ನೂ ಕೈಗೆತ್ತಿಕೊಳ್ಳಬೇಕಾಗಿರುವ ಹಿನ್ನೆಲೆಯಲ್ಲಿ ಹಾಗೂ ಪ್ರಸ್ತುತ ಸಣ್ಣ ನೀರಾವರಿ ಇಲಾಖೆಯಿಂದ ಶಿಂಷಾ ನದಿಯ ಕೆಳಭಾಗದಲ್ಲಿ ಒಂದು ಪಿಕಪ್

ನಿರ್ಮಾಣವಾಗಿರುವುದರಿಂದ ಮಳೆಗಾಲದಲ್ಲಿ ಲಭ್ಯವಾಗುವ ಹೆಚ್ಚುವರಿ ನೀರನ್ನು ನದಿಯಿಂದ 2 ಸಂಖ್ಯೆಯ 40 ಹೆಚ್.ಪಿ. ಪಂಪುಗಳನ್ನು ಸ್ಥಾಪಿಸಿ 2.86 ಕ್ಯೂಸೆಕ್ಸ್ ನೀರನ್ನು 1.00 ಕಿ.ಮೀ. ರೈಸಿಂಗ್ ಪೈಪ್ ಮುಖಾಂತರ ಎತ್ತಿ 1.50 ಕಿ.ಮೀ. ಫೀಡರ್ ಕಾಲುವೆ ಮುಖಾಂತರ ಬಂಡೀಹಳ್ಳಿ ಕೆರೆಗೆ ಹರಿಸಲು ಕ್ರಮಕೈಗೊಳ್ಳಲು ಉದ್ದೇಶಿಸಲಾಗಿದೆ.

ಆ) ಈ ಯೋಜನೆಯನ್ನು ಪುನಶ್ಚೇತನಗೊಳಿಸುವ ದೃಷ್ಟಿಯಿಂದ ಅಂದಾಜನ್ನು ತಯಾರಿಸಲು ಕಾವೇರಿ ನೀರಾವರಿ ನಿಗಮವು ಕಾರ್ಯಪ್ರವೃತ್ತವಾಗಿದ್ದು, ಕಾವೇರಿ ನೀರಾವರಿ ನಿಗಮದ ತಾಂತ್ರಿಕ ಉಪಸಮಿತಿ ಮತ್ತು ಮಂಡಳಿಯ ಅನುಮೋದನೆ ಪಡೆದು ಈ ಸಾಲಿನಲ್ಲಿ ಯೋಜನೆಯನ್ನು ಕೈಗೊಳ್ಳಲು ಉದ್ದೇಶಿಲಾಗಿದೆ.

ಮಾರ್ಕೋನಹಳ್ಳಿ ಜಲಾಶಯ

43 (117) ಶ್ರೀ ಬಿ. ಬಿ. ರಾಮಸ್ವಾಮಿ ಗೌಡ (ಕುಣಿಗಲ್):– ಮಾನ್ಯ ಜಲಸಂಪನ್ಮೂಲಗಳ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕುಣಿಗಲ್ ತಾಲ್ಲೂಕಿನಲ್ಲಿನ ಮಾರ್ಕೋನಹಳ್ಳಿ ಜಲಾಶಯದಿಂದ ಮಂಗಳ ಜಲಾಶಯಕ್ಕೆ ಹಿನ್ನೀರಿನ ಸಂಪರ್ಕ ಕಾಲುವೆ ನಿರ್ಮಾಣ ಮಾಡುವ ಕಾಮಗಾರಿಯನ್ನು ಪ್ರಾರಂಭಿಸಲು ವಿಳಂಬ ಮಾಡುತ್ತಿರುವುದಕ್ಕೆ ಕಾರಣಗಳೇನು;

ಆ) ಹಾಗಿದ್ದಲ್ಲಿ, ಕಾಮಗಾರಿಗಳನ್ನು ಸರ್ಕಾರ ಎಂದು ಪ್ರಾರಂಭಿಸಲಾಗುವುದು?

ಶ್ರೀ ಬಸವರಾಜ್ ಬೊಮ್ಮಾಯಿ (ಜಲಸಂಪನ್ಮೂಲಗಳ ಸಚಿವರು):–

ಅ) ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಮಾರ್ಕೋನಹಳ್ಳಿ ಜಲಾಶಯದಿಂದ ಮಂಗಳ ಜಲಾಶಯಕ್ಕೆ ಹಿನ್ನೀರಿನ ಸಂಪರ್ಕ ಮಾಡುವ ಪ್ರಸ್ತಾವನೆಯ ಬಗ್ಗೆ ಕಾವೇರಿ ನೀರಾವರಿ ನಿಗಮದ ಪರಿಶೀಲನೆಯಲ್ಲಿದೆ.

ಮಾರ್ಕೋನಹಳ್ಳಿ ಜಲಾಶಯವನ್ನು ಶಿಂಷಾ ನದಿಗೆ ಅಡ್ಡಲಾಗಿ ನಿರ್ಮಿಸಿದ್ದು, ಜಲಾಶಯವು 5942 ಹೆ. ಅಚ್ಚುಕಟ್ಟು ಪ್ರದೇಶವನ್ನು ಹೊಂದಿರುತ್ತದೆ. ಪ್ರಸ್ತುತ ಹೇಮಾವತಿ ಯೋಜನೆಯಿಂದ ನೀರು ಹರಿಸುತ್ತಿರುವುದರಿಂದ ಸೀಪೇಜ್ ನೀರು ಶಿಂಷಾ ವ್ಯಾಲಿಯ ಮೂಲಕ ಮಾರ್ಕೋನಹಳ್ಳಿ ಜಲಾಶಯಕ್ಕೆ ಬಂದು ಸೇರುತ್ತಿರುವುದರಿಂದ ಅಚ್ಚುಕಟ್ಟಿಗೆ ಯಾವುದೇ ವ್ಯತ್ಯಯವಿಲ್ಲದಂತೆ ನೀರು ಪೂರೈಕೆಯಾಗುತ್ತಿರುತ್ತದೆ.

ಮಂಗಳ ಜಲಾಶಯವನ್ನು ನಾಗಿನಿ ನದಿಗೆ ಅಡ್ಡಲಾಗಿ ನಿರ್ಮಿಸಿದ್ದು, ಜಲಾಶಯವು